# ಶೇಷನ್ ಭಾಷಣದ ನೆನಪಿನಲ್ಲಿ...

**ಚುನಾವಣಾ ಆಯುಕ್ತರಾಗಿದ್ದ ಟಿ.ಎನ್. ಶೇಷನ್ ಅವರ ಭಾಷಣವನ್ನು ಕನ್ನಡಕ್ಕೆ ತರ್ಜುಮೆ ಮಾಡುವ ಸದವಕಾಶ ಕಾರ್ಯಕ್ರಮವೊಂದರಲ್ಲಿ ಒದಗಿ ಬಂದಿತ್ತು. ಈ ಅಪೂರ್ವ ಅವಕಾಶ ನನ್ನ ಜೀವನದ ಅವಿಸ್ಮರಣೀಯ ನೆನಪಾಗಿ ಉಳಿದಿದೆ.**

■ ವಾ. ಮುರಳೀಧರ,ತೀರ್ಥಹಳ್ಳಿ




ಭಾರತದ ಚುನಾವಣಾ ಆಯುಕ್ತರಾಗಿ ದಿಟ್ಟತನದಿಂದ ದುಡಿದು ಮನೆಮಾತಾದ ವ್ಯಕ್ತಿ ಟಿ.ಎನ್. ಶೇಷನ್. ಅವರೊಂದಿಗೆ ಒಡನಾಡಿದ ಕೆಲಕ್ಷಣ ಬದುಕಿನಲ್ಲಿ ಎಂದಿಗೂ ನೆನಪಿನಲ್ಲಿ ಉಳಿಯುವಂಥದ್ದು.

1999 ರ ಮಾರ್ಚ್ 2. ಬೆಳಿಗ್ಗೆ ಹತ್ತು ಗಂಟೆ ಇರಬಹುದು. ಹೇರಂಬಾಪುರ ಸುಬ್ರಮಣ್ಯ ಕರೆ ಮಾಡಿ 'ಇವತ್ತು ಮಧ್ಯಾಹ್ನ ನಮ್ಮಲ್ಲಿಗೆ ಬರಕ್ಕೆ ಆಗತ್ತಾ?' ಎಂದು ಕೇಳಿದರು. ಕಾರಣ ಕೇಳಲಾಗಿ 'ಚುನಾವಣಾ ಆಯುಕ್ತ ಟಿ.ಎನ್. ಶೇಷನ್ ಬಂದಿದ್ದಾರೆ. ಸಂಜೆ ಅವರ ಭಾಷಣ ಇದೆ. ಅದನ್ನು ಅನುವಾದ ಮಾಡಕ್ಕೆ ಆಗತ್ತಾ?' ಅಂದ್ರು. ನಾನು ಸ್ಥಾಪಕ ಅಧ್ಯಕ್ಷನಾಗಿದ್ದ ಜೇಸಿ ಸಂಸ್ಥೆ 'ಅವಕಾಶ ಬಂದಾಗ ಬಾಚಿಕೊಳ್ಳಬೇಕು' ಎಂದು ತರಬೇತಿಗಳಲ್ಲಿ ಹೇಳಿದ್ದು ನೆನಪಾಗಿ ತಕ್ಷಣ ಒಪ್ಪಿಕೊಂಡುಬಿಟ್ಟೆ. ಕಚೇರಿಗೆ ಮಧ್ಯಾಹ್ನ ರಜೆ ಹಾಕಿ ಹೊರಟೂ ಬಿಟ್ಟೆ. ತೀರ್ಥಹಳ್ಳಿಯಿಂದ ಸುಮಾರು ಇಪ್ಪತ್ತೊಂದು ಕಿಲೋ ಮೀಟರ್ ದೂರದ ಹೇರಂಬಾಪುರದ ಕಡೆ ಬೈಕ್ ತಿರುಗಿಸಿದೆ. ದಾರಿಯುದ್ದಕ್ಕೂ ಈ ಅವಕಾಶ ನನ್ನವರೆಗೆ ಹೇಗೆ ಬಂದಿರಬಹುದು ಎಂದು ತಲೆ ಕೆರೆದುಕೊಂಡಿದ್ದೆ.

ಶೇಷನ್ ಅವರ ಪಾಂಡಿತ್ಯ ಮತ್ತು ನಿಷ್ಠುರ ನುಡಿಗಳಿಗೆ ಅಂಜಿ ತೀರ್ಥಹಳ್ಳಿಯ ಘಟಾನು ಘಟಗಳೆಲ್ಲಾ ಈ ಅವಕಾಶವನ್ನು ನಿರಾಕರಿಸಿದ್ದರಿಂದ ಅದು ಕಡೆಗೆ ನನ್ನ ಪಾಲಿಗೆ ಪಂಚಾಮೃತವಾಗಿ ಬಂದಿತ್ತು. ಅಂಗ ರಕ್ಷಕರನ್ನು ದಾಟಿ ಶೇಷನ್ ಅವರನ್ನು ಭೇಟಿಯಾಗಲು ಸ್ವಲ್ಪ ಸಮಯ ಹಿಡಿಯಿತು. ಪರಿಚಯ ಮಾಡಿಕೊಟ್ಟರು. ಯಾವುದೋ ಗಂಭೀರ ಚರ್ಚೆಯಲ್ಲಿದ್ದ ಅವರು ನನ್ನ ಕಡೆಗೆ ತಿರುಗಿ 'ನಿಮಗೆ ಇಂಗ್ಲಿಷೋ; ಹಿಂದಿಯೋ?' ಎಂದು ವಿಚಾರಿಸಿದರು. 'ಇಂಗ್ಲಿಷ್' ಎಂದಿದ್ದೆ. 'ಸಿದ್ಧರಾಗಿ' ಎಂದು ಪುನಃ ಚರ್ಚೆಗೆ ತೊಡಗಿದರು. ತಮ್ಮ ಕಾರ್ಯವೈಖರಿಯಿಂದ ಇಡಿಯ ಭಾರತವನ್ನೇ ಅಲುಗಾಡಿಸಿದ ಆ ವಾಮನಮೂರ್ತಿಯನ್ನು ಅತಿ ಸನಿಹದಿಂದ ಕಂಡು ಹೆಮ್ಮೆಯಿಂದ ಕಣ್ತುಂಬಿಕೊಂಡಿದ್ದೆ.

ಕಾರ್ಯಕ್ರಮ ಆರಂಭವಾಯಿತು. ನಾನು ಕೈಯಲ್ಲಿ ಪೆನ್ನು ಪೇಪರ್ ಹಿಡಿದು, ಕಿವಿಗಳನ್ನು ಅಗಲಿಸಿ, ಅವರ ಮಾತುಗಳನ್ನು ಗಮನವಿಟ್ಟು ಆಲಿಸುತ್ತಾ ಶೀಘ್ರ ಲಿಪಿಕಾರನಂತೆ ಮುಖ್ಯ ಪದ ಗಳನ್ನು ಗುರುತು ಹಾಕಿಕೊಳ್ಳುತ್ತಾ ಅನುವಾದ ಆರಂಭಿಸಿದೆ. ಆರಂಭದಲ್ಲಿ ಏನೂ ತೊಂದರೆಯಾಗಲಿಲ್ಲ. ಮಲೆನಾಡಿನ ಜನರ ಅತಿಥಿ ಸತ್ಕಾರವನ್ನು ಹೊಗಳಿದ ಶೇಷನ್ ತಮಗೆ ಗೌರವ ರೂಪದಲ್ಲಿ ಸಂದ ಅಡಿಕೆ ಮಾರಿದರೆ ಬಹಳಷ್ಟು ಹಣ ಸಿಗಬಹುದು ಎಂದು ಚಟಾಕಿ ಹಾರಿಸುತ್ತ ಲೋಕ ಕಲ್ಯಾಣಕ್ಕಾಗಿ ಜಲದುರ್ಗಾ ಸೇವಾ ಸಮಿತಿ ನಡೆಸಿದ ಯಾಗವನ್ನು ಮೆಚ್ಚಿಕೊಳುತ್ತಾ ಇದ್ದಕ್ಕಿದ್ದಂತೆ ಪುರೋಹಿತ ವರ್ಗದ ಲಾಲಸೆಯ ಕಡೆಗೆ ಹೊರಳಿದರು. ಅವರು ಹಣ ಕೊಟ್ಟರೆ ಯಾರಿಂದ ಏನು ಬೇಕಾದರೂ ಮಾಡಿಸುತ್ತಾರೆಂದು ಜರಿದರು. ನಾನು ಇಲ್ಲಿಗೆ ಬರುವಾಗ ಕಾರಿನಲ್ಲಿ ಆಲೂಗಡ್ಡೆಯಂತೆ ಹಾರಾಡುತ್ತಿದ್ದೆ. (I was jumping like a potato in the car) ಈ ಕ್ಷೇತ್ರದ ಶಾಸಕರು ಎಲ್ಲಿದ್ದಾರೆ? ರಸ್ತೆ ಏಕೆ ಹೀಗಿದೆ? ಇಲ್ಲಿ ಇರುವ ಪತ್ರಿಕೆಯವರು ಇದರ ಬಗ್ಗೆ ಬರೆಯದೆ ನಾಳೆ 'ಶೇಷನ್ ಬಂದ್ರು. ಶೇಷನ್ ಹೋದ್ರು' ಅಂತ ಅಷ್ಟೆ ಬರೀತಾರೆ ಎಂದು ಕಿಡಿಕಾರಿದರು. ಒಂದರ್ಥದಲ್ಲಿ ಲೋಕ ಕಲ್ಯಾಣಕ್ಕೆ ಅವೂ ಅನಿವಾರ್ಯ ಎಂದು ಸಂಬಂಧಪಟ್ಟವರ ಸಮ್ಮುಖದಲ್ಲೇ ಎತ್ತಿ ತೋರಿಸಿದರು.

ಒಂದು ಕಡೆ ನನ್ನ ಪದ ಪ್ರಯೋಗ ಅವರಿಗೆ ಸೂಕ್ತವೆನಿಸಲಿಲ್ಲವೆಂದು ಅತೃಪ್ತಿ ವ್ಯಕ್ತಪಡಿಸಿದರು. ಒಂದು ಹಂತದಲ್ಲಿ ಅವರನ್ನು ಅಲ್ಲಿಗೆ ಕರೆತಂದ ಶಿಕ್ಷಕ ಹಾಗೂ ತಮ್ಮ ಪತ್ನಿ ಅನುವಾದ ಮಾಡಿದ್ದನ್ನೂ ಒಪ್ಪದೆ ಅನುವಾದವೇ ಬೇಡ ಎಂದು ಭಾಷಣ ಮಾಡಿ ಮುಗಿಸಿದರು. ಹಲವು ಭಾಷೆಗಳಲ್ಲಿ ಪಾಂಡಿತ್ಯ ಹೊಂದಿದ್ದ ಶೇಷನ್ ಅವರ ಈ ನಡೆ ನನಗಂತೂ ವಿಶೇಷವೆನಿಸಲಿಲ್ಲ. ನನಗೆ ಒಂದು ಅಪೂರ್ವ ಅವಕಾಶದ ಜೊತೆಗೆ ಅವಿಸ್ಮರಣೀಯ ಅನುಭವ ನೀಡಿದ್ದು ಸದಾ ನೆನಪಾಗುತ್ತಿರುತ್ತದೆ. ■